# ಪವಿತ್ರ ದಾನ

ಪಂಡಿತ ಈಶ್ವರಚಂದ್ರ ವಿದ್ಯಾಸಾಗರ್ ಕಲ್ಕತ್ತೆಯ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ಉದಾರ ದಾನಿಗಳೆಂದು ಪ್ರಸಿದ್ಧರಾಗಿದ್ದ ಅವರು "ಜನಸೇವಾ ಸಂಸ್ಥೆ" ಎಂಬುದನ್ನು ನಡೆಸುತ್ತಿದ್ದರು. ತಮ್ಮ ಸ್ವಂತ ಹಣವನ್ನು ಇತರರಿಗೆ ನೀಡುವುದರೊಂದಿಗೆ, ಸಂಸ್ಥೆಯ ವತಿಯಿಂದ ಚಂದಾ ಸಂಗ್ರಹಿಸಿ ಸಮಾಜ ಸೇವಾಕಾರ್ಯಗಳಲ್ಲಿ ತೊಡಗುತ್ತಿದ್ದರು. ಒಮ್ಮೆ ಅವರು ತಮ್ಮ ನಾಲ್ಕು ಜನ ಶಿಷ್ಯರೊಂದಿಗೆ ಹಣಸಂಗ್ರಹಣೆಗಾಗಿ ಭುವನೇಶ್ವರಕ್ಕೆ ಪ್ರಯಾಣ ಮಾಡಿದರು.

ವಿದ್ಯಾಸಾಗರ್ ಹೋದೆಡೆಯೆಲ್ಲ ಆದರದ ಸ್ವಾಗತದೊಂದಿಗೆ ಅಲ್ಪ ಸ್ವಲ್ಪ ಹಣ ಸಂಗ್ರಹಣೆ ಕೂಡ ಆಯಿತು. ಬಡವರು, ಸಮಾಜದ ಮಧ್ಯಮ ವರ್ಗದವರೂ ಕೂಡ, ತಮ್ಮ ಕೈಲಾದಷ್ಟು ಸಹಾಯವನ್ನು ನೀಡಿದರು. ಅಲ್ಲಿನ ಮುಖ್ಯಸ್ಥರು, ಆ ಊರಿನ ಜಮೀನ್‌ದಾರ್ ಗೋಪಾಲದಾಸರ ಹೆಸರು ಹೇಳಿ, "ಅವರು ಬಹಳ ಉದಾರಿ, ಅವರಿಂದ ಸಹ ನಿಮಗೆ ಹಣ ಸಿಗುವುದು" ಎಂದು ತಿಳಿಸಿದ ಕಾರಣ, ವಿದ್ಯಾಸಾಗರ್ ಗೋಪಾಲದಾಸರ ಮನೆಯನ್ನು ಹುಡುಕಿಕೊಂಡು ಹೋದರು. ಸುಮಾರು ಅರ್ಧ ಘಂಟೆ ಕಾಲ ಹುಡುಕಿದ ನಂತರ ಗೋಪಾಲದಾಸರ ಮನೆ ಸಿಕ್ಕಿತು. ಅವರಿಗೆ ಪಿತ್ರಾರ್ಜಿತ ಆಸ್ತಿ ಬಹಳ ಇತ್ತು. ವರ್ಷಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುವ ಆಸ್ತಿ. ಆ ಊರಿನವರಿಗೆಲ್ಲ ಇದು ತಿಳಿದ ವಿಷಯವೇ ಆಗಿತ್ತು.

ವಿದ್ಯಾಸಾಗರ್ ತಮ್ಮ ಶಿಷ್ಯರೊಂದಿಗೆ ಗೋಪಾಲದಾಸರ ಮನೆ ತಲುಪಿದಾಗ ಮಧ್ಯಾಹ್ನ ಸುಮಾರು ಹನ್ನೆರಡು ಘಂಟೆ ಸಮಯ. ಗೋಪಾಲದಾಸರು, ಮನೆಯ ಅಂಗಳದಲ್ಲಿ ಕುಳಿತು ತಮ್ಮ ಅಂಗಿಗೆ ಸ್ವತಃ ತಾವೇ ಗುಂಡಿ ಹೊಲೆಯುತ್ತಿದ್ದರು. ವಿದ್ಯಾಸಾಗರರನ್ನು ಕಂಡೊಡನೆ, ಆದರದಿಂದ ಬರಮಾಡಿಕೊಂಡು ಚಾಪೆಯನ್ನು ಹಾಸಿ, ಹಜಾರದಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ಬಂದ ಅತಿಥಿಗಳು ಮನೆಯ ಸುತ್ತಲೂ ಕಣ್ಣು ಹಾಯಿಸಿ ನೋಡಿದರು. ಮನೆ ಸರಳ ರೀತಿಯಲ್ಲಿತ್ತು. ಬೆಲೆ ಬಾಳುವ ಪೀಠೋಪಕರಣಗಳು ಯಾವುವೂ ಕಾಣಿಸಲಿಲ್ಲ. ಸ್ವಲ್ಪ ಯೋಚಿಸಿ, ವಿದ್ಯಾಸಾಗರ್‌ರವರು "ಗೋಪಾಲದಾಸರ ಮನೆ ಇದೇ ತಾನೇ? ಅವರು ಮನೆಯಲ್ಲಿದ್ದಾರೆಯೇ?" ಎನ್ನಲು, ಗೋಪಾಲದಾಸರು ತಮ್ಮ ಪರಿಚಯ ಮಾಡಿಕೊಂಡರು. ಅವರ ಪತ್ನಿ ಅಂಬಿಕಾ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಮಗ ಬಟ್ಟೆ ಒಗೆಯುವ ಶಬ್ದ ಕೇಳಿಸಿತು. ಎಲ್ಲೂ ಆಳು-ಕಾಳುಗಳ ಸುಳಿವೇ ಇರಲಿಲ್ಲ. ಖರ್ಚು ಮಾಡಲು ಇಷ್ಟು ಬಿಗಿಮುಷ್ಟಿಯಿಂದಿರುವ ಈ ಜಿಪುಣನ ಹತ್ತಿರ ತಮಗೆ ಒಂದು ಕವಡೆ ಕಾಸೂ ಸಿಗಲಾರದೆಂದು ಭಾವಿಸಿದರು. ಅಷ್ಟರಲ್ಲಿ ಪತ್ನಿ ಅಂಬಿಕಾ ಅಡುಗೆ ಮನೆಯಿಂದ ಹೊರಬಂದು, ಅತಿಥಿಗಳನ್ನು ಕಂಡು, ನಮಸ್ಕರಿಸಿ, ಗೋಪಾಲದಾಸರನ್ನು ಒಳಗಡೆ ಬರುವಂತೆ ಕರೆದರು. "ಮಧ್ಯಾಹ್ನ ಊಟದ ಸಮಯ, ಅತಿಥಿಗಳಿಗೆ ಊಟದ ವ್ಯವಸ್ಥೆ ಮಾಡಲೆ?" ಎಂದು ಕೇಳಿದರು. ಅದಕ್ಕೆ ಗೋಪಾಲದಾಸರು, "ಪಂಡಿತ್‌ಜಿ ಅವರ ವೇಳೆಯನ್ನು ನಾವು ಹಾಳು ಮಾಡಬಾರದು, ಅದು ಉಚಿತವಲ್ಲ. ಕೇವಲ ಬೇಗ ಚಹ ತಯಾರಿಸಿ, ಬಿಸ್ಕತ್ತಿನ ಜೊತೆ ಕೊಟ್ಟರೆ ಸಾಕು" ಎಂದರು. ಇವರ ಸಂಭಾಷಣೆಯನ್ನು ಶಿಷ್ಯರು ಕೇಳಿಸಿಕೊಂಡರು. ಒಬ್ಬರ ಮುಖ ಒಬ್ಬರು ನೋಡಿಕೊಂಡು ಗೋಪಾಲದಾಸರು ಬಹಳ ಜಿಪುಣರು. ಇವರಿಂದ ನಮಗೆ ಖಂಡಿತ ಹಣಸಹಾಯ ಸಿಗುವುದಿಲ್ಲವೆಂದು ತಮ್ಮಲ್ಲೇ ಪಿಸು ಮಾತಿನಲ್ಲಿ ಆಡಿಕೊಂಡರು.

ವಿದ್ಯಾಸಾಗರ್ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಹೇಗೂ ಬಂದಾಯಿತು, ಬಂದ ಕಾರಣವನ್ನು ತಿಳಿಸಿ ಅಲ್ಪವಾದರೂ ಹಣಸಹಾಯ ಮಾಡಿರೆಂದು ಕೇಳಿದರಾಯಿತು ಎಂದು ತಾವು ಬಂದ ಉದ್ದೇಶವನ್ನು ತಿಳಿಸಲು, ಗೋಪಾಲದಾಸರು ಕನ್ನಡಕವನ್ನು ಮೂಗಿನ ಮೇಲಿಳಿಸಿ, ವಿದ್ಯಾಸಾಗರರನ್ನು ಉದ್ದೇಶಿಸಿ, "ಓಹ್! ಅದಕ್ಕಾಗಿಯೇ ತಾವು ಬಂದಿರುವುದು? ಆಗಲಿ. ಅದಕ್ಕೇನು, ನನ್ನ ಕೈಲಾದ ಹಣಸಹಾಯ ಮಾಡುವೆನು" ಎಂದು ಹೇಳಿ ಒಳಗೆ ಹೋದರು. ಅದೇ ಸಮಯದಲ್ಲಿ ಆತನ ಪತ್ನಿ ಅತಿಥಿಗಳಿಗೆ ಬಿಸಿ ಚಹಾ, ಬಿಸ್ಕತ್ತುಗಳನ್ನು ಆದರದಿಂದ ತಂದುಕೊಟ್ಟರು.

ಚೆಕ್ ಪುಸ್ತಕವನ್ನು ಕೈಲಿ ಹಿಡಿದು ಬಂದ ಗೋಪಾಲದಾಸರು ತಾವು ಕೊಡಲಿಚ್ಛಿಸಿದ ಹಣಸಹಾಯವನ್ನು ನಮೂದಿಸಿ, ರುಜು ಹಾಕಿ, ನಮ್ರತೆಯಿಂದ ವಿದ್ಯಾಸಾಗರ್ ಕೈಗೆ ಒಪ್ಪಿಸಿದರು. ಚೆಕ್ ನೋಡಿ, ವಿದ್ಯಾಸಾಗರ್ ಆಶ್ಚರ್ಯಚಕಿತರಾಗಿ, "ಓಹ್! ಇದೇನು? ಒಂದು ಲಕ್ಷ ರೂ ಬರೆದಿರುವಿರಿ? ಇದುವರೆಗೂ ಎಲ್ಲರಿಂದ ಅಬ್ಬಾ ಎಂದರೆ, ಐದುನೂರು, ಸಾವಿರ ರೂಪಾಯಿಗಳ ಮೇಲೆ ನಮಗೆ ದೊರಕಿಲ್ಲ" ಎಂದರು.

ಅಷ್ಟರಲ್ಲಿ ಒಬ್ಬ ಶಿಷ್ಯನು ಆಶ್ಚರ್ಯವನ್ನು ತಡೆಯಲಾರದೆ ತನ್ನ ಪ್ರಶ್ನೆಯನ್ನು ಕೇಳಿಯೇ ಬಿಟ್ಟನು: "ಜಮೀನ್‌ದಾರರೇ, ಇಷ್ಟು ಶ್ರೀಮಂತಿಕೆ ಇದ್ದರೂ ಒಬ್ಬ ಸಾಧಾರಣ ವ್ಯಕ್ತಿಯಂತೆ ನಿಮ್ಮ ಕೆಲಸಗಳನ್ನು ನೀವೇ ಮಾಡಿಕೊಳ್ಳುವಿರಿ. ಸೇವಕರ ಸುಳಿವೂ ಇಲ್ಲ. ಇದು ಆಶ್ಚರ್ಯದ ಸಂಗತಿ, ನಮಗರ್ಥವಾಗುತ್ತಿಲ್ಲಾ." ಗೋಪಾಲದಾಸರು ನಸುನಕ್ಕು, "ನೋಡಿ ನಾನು, ಸ್ವತಃ ಹೆಚ್ಚು ಹಣ ಸಂಪಾದಿಸಿಲ್ಲ. ಇರುವುದರಲ್ಲೇ ಸರಳ ಜೀವನವನ್ನು ಅಳವಡಿಸಿಕೊಂಡಿದ್ದೇನೆ. ಆದರೆ ನಮ್ಮ ಪೂರ್ವಿಕರು ಸಂಪಾದಿಸಿದ ಹಣವನ್ನು ನನ್ನ ಸ್ವಾರ್ಥಕ್ಕೆ ಉಪಯೋಗಿಸದೆ, ಅದನ್ನು ಮಾತ್ರ ಜನ-ಸಮಾಜದ ಸೇವೆಗೆಂದು ಮೀಸಲಾಗಿಟ್ಟಿರುವೆ. ಆದ್ದರಿಂದ ಆದಷ್ಟೂ ಸರಳ ಜೀವನ ನಡೆಸಿ, ಶ್ರೀಮಂತರಾದ ನಮ್ಮ ಪೂರ್ವಜರು ಕೂಡಿಟ್ಟ ಹಣ ನೀವು ನಡೆಸುತ್ತಿರುವ ಒಳ್ಳೆಯ ಸಂಸ್ಥೆಗಳಿಗೆ ಸದ್ವಿನಿಯೋಗವಾಗಲಿ ಎನ್ನುವುದೇ ನನ್ನ ಅಭಿಲಾಷೆ" ಎಂದರು.

**ಸಂಗ್ರಹ : ಪುಷ್ಪ ಶೇಷಾದ್ರಿ.**